# ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ

## DR. SHIVARAMA KARANTHA PILIKULA NISARGA DHAMA

ಆಡಳಿತ ಕಚೇರಿ, ಮೂಡುಶೆಡ್ಡೆ ಅಂಚೆ, ಮಂಗಳೂರು – 575 028, ದೂ : 0824 – 2263565 ಫ್ಯಾಕ್ಸ್ : 2263562

Administrative Office, Moodushedde Post, Mangaluru – 575 028 Ph : 0824 - 2263565 Fax : 2263562

Website:www.pilikula.com Email: pilikula96@gmail.com

ನಂ.ಪಿನಿಧಾ: ವಿವ: 1/ವಾಹನ/2018-19 ದಿ: 09.01..2019

## ಟೆಂಡರ್ ಪ್ರಕಟಣೆ

ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ ಯೋಜನೆಯ ಉಪಯೋಗಕ್ಕಾಗಿ ಹೊರಗುತ್ತಿಗೆಯಲ್ಲಿ ವಾಹನವನ್ನು ಒದಗಿಸಲು ಈ ಕೆಳಕಾಣಿಸಿದ ನಿಬಂಧನೆಗಳಿಗೆ ಅನುಸಾರವಾಗಿ ಆಸಕ್ತ ವಾಹನ ಮಾಲಿಕರಿಂದ/ಟ್ರಾವೆಲ್ ಏಜೆನ್ಸಿಗಳಿಂದ ಟೆಂಡರನ್ನುಆಹ್ವಾನಿಸಲಾಗಿದೆ.

**(1) 01.01.2016 ರ ನಂತರದ ಎ.ಸಿ. ಸೌಲಭ್ಯ ಹೊಂದಿರುವ ಮಹೀಂದ್ರ ಬೊಲೆರೊ ವಾಹನ**

1. 01.01.2016 ನಂತರ ನೋಂದಣಿಯಾಗಿರುವ ಸುಸ್ಥಿತಿಯಲ್ಲಿರುವ ವಾಹನವಾಗಿರಬೇಕು.
2. ಗುತ್ತಿಗೆ ವಾಹನವನ್ನು ಪೂರ್ತಿ ಸಂಸ್ಥೆಯ ಅಧೀನದ ಉಪಯೋಗಕ್ಕೆ **12** ಗಂಟೆಗಳ ಸೇವೆಗೆ ವಹಿಸಿಕೊಡತಕ್ಕದ್ದು.
3. ಗುತ್ತಿಗೆ ಆಧಾರದ ಮೇಲೆ ನೀಡಿರುವ ವಾಹನದ ಇಂಧನ, ದುರಸ್ತಿ ವೆಚ್ಚ, ಚಾಲಕರ ವೇತನ, ಭವಿಷ್ಯ ನಿಧಿ (ಇನ್ಸುರೆನ್ಸ್), ತೆರಿಗೆ (ಹೊರರಾಜ್ಯಕ್ಕೆ ಪ್ರಯಾಣಿಸುವಾಗ ಪಾವತಿಸಬೇಕಾಗಿದ್ದತೆರಿಗೆ ಸೇರಿ), ಇತ್ಯಾದಿಗಳನ್ನು ಪೂರ್ತಿ ಮಾಲಿಕರ ವತಿಯಿಂದಲೇ ಭರಿಸತಕ್ಕದ್ದು. ಯಾವುದೇ ರೀತಿಯ ವೆಚ್ಚವನ್ನು ಗುತ್ತಿಗೆಗೆ ಪಡಕೊಂಡವರಿಂದ ನೀಡಲಾಗುವುದಿಲ್ಲ.
4. ವಾಹನವನ್ನು ಕನಿಷ್ಠ ಒಂದು ತಿಂಗಳಿಗೆ 2000 ಕಿ.ಮೀ. ಚಲಾಯಿಸಲಾಗುವುದು. ಆದುದರಿಂದ, ತಿಂಗಳೊಂದರ ಒಟ್ಟುದರವನ್ನು ನಮೂದಿಸಬೇಕು. 2000 ಕಿ.ಮೀ. ಕ್ಕಿಂತ ಮೀರಿ ಚಲಾಯಿಸಿದಲ್ಲಿ ಹೆಚ್ಚಿಗೆ ಚಲಾಯಿಸಿದ ದೂರಕ್ಕೆ (ಕಿ.ಮೀ. 1 ಕ್ಕೆ) ನೀಡಬೇಕಾದದರವನ್ನು ನಮೂದಿಸಬೇಕು.
5. ವಾಹನವನ್ನು ದುರಸ್ತಿಗೆ ಅಥವಾ ಇನ್ನಿತರ ಯಾವುದಾದರೂ ಕೆಲಸಗಳಿಗೆ ಮಾಲಿಕರ ವತಿಯಿಂದ ನಿಲ್ಲಿಸಿದಲ್ಲಿ ಯಾವುದೇ ವಿಳಂಬವಿಲ್ಲದೆ ತತ್ಸಮಾನವಾದ ಸುಸ್ಥಿತಿಯಲ್ಲಿರುವ ಬದಲಿ ವಾಹನವನ್ನು ತಕ್ಷಣ ಒದಗಿಸಲು ಬದ್ಧರಿರಬೇಕು.
6. ಮಾಲಿಕರೇ ಚಾಲಕರಾಗಿರುವ ವಾಹನಗಳ ಟೆಂಡರಿಗೆ ಆದ್ಯತೆ ನೀಡಲಾಗುವುದು.
7. ಈ ಗುತ್ತಿಗೆಯು ಟೆಂಡರ್ ಅಂಗೀಕರಿಸಿದ ದಿನಾಂಕದಿಂದ 2 ವರ್ಷ ಅಥವಾ ಈ ಆದೇಶವನ್ನು ರದ್ದುಪಡಿಸಿದ ದಿವಸ ಯಾವುದು ಮೊದಲು ಬರುವುದೊ ಅಲ್ಲಿಯವರೆಗೆ ಇರುತ್ತದೆ. ಅಗತ್ಯವೆಂದು ಕಂಡು ಬಂದಲ್ಲಿ ಹಾಗೂ ವಾಹನದ ಸೇವೆಯು ತೃಪ್ತಿಕರವಾದಲ್ಲಿ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕರ ವಿವೇಚನೆಯಲ್ಲಿ ಮುಂದಿನ ಅವಧಿಗೆ ಮುಂದುವರಿಸಲಾಗುವುದು. ಆದರೆ, ಗುತ್ತಿಗೆಯನ್ನು ಮುಂದುವರಿಸಲು ಪ್ರೇರಣೆ ನೀಡಲು ಗುತ್ತಿಗೆದಾರರಿಗೆ ಅವಕಾಶವಿರುವುದಿಲ್ಲ.

2

8. ವಾಹನದ ಗೈರು ಹಾಜರಿ ಅವಧಿಯಲ್ಲಿ ಸಂಸ್ಥೆಯಿಂದ ನಿರ್ವಹಿಸಬೇಕಾದ ಕೆಲಸಗಳಿಗೆ ಬದಲಿ ವಾಹನವನ್ನು ಕೂಡಾ ಮಾಲಿಕರು ನೀಡದೇ ಇರುವ ಸಂದರ್ಭದಲ್ಲಿ ಸಂಸ್ಥೆಯ ವತಿಯಿಂದ ವಾಹನದ ಸೇವೆಯನ್ನು ಪಡೆದಲ್ಲಿ ತಗಲಿದ ನಿಜವಾದ ಬಾಡಿಗೆಯನ್ನು ಗುತ್ತಿಗೆದಾರರಿಂದ ವಸೂಲು ಮಾಡಲಾಗುವುದು ಅಥವಾ ಅವರ ಬಿಲ್ಲಿನಿಂದ ಕಡಿತಗೊಳಿಸಲಾಗುವುದು. ಈ ರೀತಿ1-2 ದಿವಸಗಳಿಗಿಂತ ಹೆಚ್ಚಿಗೆ ವಾಹನವನ್ನು ಒದಗಿಸಲು ವಿಫಲರಾದಲ್ಲಿ ಯಾವುದೇ ಕಾರಣ ನೀಡದೆಗುತ್ತಿಗೆದಾರರ ಹೊಣೆಗಾರಿಕೆಯಲ್ಲಿ ಗುತ್ತಿಗೆಯನ್ನು ರದ್ದುಪಡಿಸಲಾಗುವುದು.

9. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ 25.01.2019 ಅಪರಾಹ್ನ 4.00 ಗಂಟೆಯತನಕ. ಸ್ವೀಕೃತಿಯಾದ ದರಪಟ್ಟಿಯನ್ನು ದಿ: 25.01.2019 ರಂದು ಅಪರಾಹ್ನ 4.30 ಗಂಟೆಗೆ ತೆರೆಯಲಾಗುವುದು.

10. ಗುತ್ತಿಗೆಗೆ ನೀಡಲಿರುವ ವಾಹನಕ್ಕೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ವಾಹನದಲ್ಲಿ ಇರಿಸತಕ್ಕದ್ದು ಮತ್ತುಅದರ ಪ್ರತಿಯನ್ನು ದರಪಟ್ಟಿ ಜೊತೆಯಲ್ಲಿ ಲಗ್ತೀಕರಿಸತಕ್ಕದ್ದು.

11. ಯಾವುದೇ ದಾವೆಗಳಿಗೆ ಒಳಪಟ್ಟ ವಾಹನವನ್ನು ನೀಡಲು ಅವಕಾಶವಿರುವುದಿಲ್ಲ.

ಕಾರ್ಯನಿರ್ವಾಹಕ ನಿರ್ದೇಶಕರು

ರಿಗೆ,

1. ಸಂಬಂಧಪಟ್ಟವರಿಗೆ ಪಟ್ಟಿ ಪ್ರಕಾರ.
2. ದ. ಕ. ಜಿಲ್ಲಾಧಿಕಾರಿಯವರ ಟೆಂಡರ್ ಬುಲೆಟಿನ್‌ಗೆ.
3. ಈ ಕಛೇರಿಯ ವಿವಿಧ ವಿಭಾಗದ ಮುಖ್ಯಸ್ಥರುಗಳಿಗೆ - ಮಾಹಿತಿಗಾಗಿ ಹಾಗೂ ಸೂಕ್ತ ಪ್ರಚಾರಕ್ಕಾಗಿ.
4. ಕಚೇರಿಯ ನೋಟೀಸು ಬೋರ್ಡಿಗೆ.